**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ209/2012</u>**

**ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **31.05.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಮುಂದುವರೆದ ಪಾಟಿ ಸವಾಲುಃ** ಪ್ರತಿವಾದಿ ಪರ ವಕೀಲರಾದ ಶ್ರೀ **ವಿ.ಎಂ.ಎನ್.ಪಿ** ವಕೀಲರಿಂದಃ</u>

ಪಟ್ಟಣ ಪಂಚಾಯತಿಯವರು ದಾವಾ ಆಸ್ತಿಯ ಪಾರಂ-ಸಿ ಪ್ರಕಾರ ಕಾಲಂ-**2** ಮತ್ತು **6** ರಲ್ಲಿ ಆಸ್ತಿಯ ವಿವರಗಳನ್ನು ಗಣಕೀಕೃತ ಮಾಡಲು ನಿಪಿ-**13** ರಂತೆ ನಮಗೆ ನೀಡಿರುತ್ತಾರೆ ಎಂದರೆ ಸರಿ. ನಿಪಿ-**13** ರಲ್ಲಿ ಕಾಲಂ-**2** ಮತ್ತು **6** ಇರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-**13** ದಾಖಲೆಯು ಪಟ್ಟಣ ಪಂಚಾಯತಿಯವರು ಸಾರ್ವಜನಿಕರಿಂದ ತೆರಿಗೆ ಸಂಗ್ರಹ ಮಾಡಲು ನೀಡುವ ಸೂಚನೆ ಪತ್ರ ಎಂದರೆ ಸರಿ. **1** ನೇ ಪ್ರತಿವಾದಿಯು ದಾವಾ ಆಸ್ತಿಯು ನನಗೆ ಹೇಗೆ ಬಂದಿರುತ್ತದೆ ಎಂದು ತಿಳಿದುಕೊಳ್ಳಲು ನೋಟಿಸ್ ನೀಡಿರುವುದಿಲ್ಲ.

ದಿನಾಂಕ **23.04.2012** ಮತ್ತು **07.05.2012** ರಂದು **1** ನೇ ಪ್ರತಿವಾದಿಯು ನನಗೆ ನೋಟಿಸ್ ಜಾರಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿಯವರು ನೋಟಿಸ್ ನನಗೆ ವೈಯುಕ್ತಿಕವಾಗಿ ಜಾರಿ ಮಾಡಿರುವುದಿಲ್ಲ, ಆದರೆ ಗೋಡೆಗೆ ಅಂಟಿಸಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನೋಟಿಸಗಳಿಗೆ ಸಂಬಂಧಿಸಿದಂತೆ **1** ನೇ ಪ್ರತಿವಾದಿಯವರಿಗೆ ಪ್ರತ್ಯುತ್ತರ ನೀಡಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. **1** ನೇ ಪ್ರತಿವಾದಿಯವರು ನನ್ನ ಆಸ್ತಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಕೋರಿ ನೋಟಿಸ್ ನೀಡಿದ್ದರೂ ಸಹ ನಾನು ಅದಕ್ಕೆ ಉತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಯವರು ನಿಪಿ-**32** ರಂತೆ ಅಂತಿಮ ತಿಳುವಳಿಕೆ ಪತ್ರ ನೀಡಿ ದಾಖಲೆಗಳನ್ನು ಹಾಜರುಪಡಿಸುವಂತೆ ಸೂಚಿಸಿದ್ದು, ಸದರಿ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ನೋಟಿಸ್ ನಮಗೆ ಜಾರಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-**32** ದಾಖಲೆಯನ್ನು

ಪಂಚಾಯತಿ ಕಾರ್ಯಾಲಯಕ್ಕೆ ಅರ್ಜಿ ಕೊಟ್ಟು ಪಡೆದುಕೊಂಡಿರುತ್ತೇನೆ. ಸದರಿಯ ಅರ್ಜಿಯ ನಕಲು ಅಥವಾ ಸ್ವೀಕೃತಿ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-32 ನೋಟಿಸ್ ನನಗೆ ಜಾರಿ ಮಾಡಿದ್ದರೂ ಸಹ ನನ್ನ ಅದಕ್ಕೆ ಪ್ರತ್ಯುತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯತಿ ಕಾರ್ಯಾಲಯದಿಂದ ಪಡೆದುಕೊಂಡ ನಿಪಿ-32 ನೋಟಿಸಗೆ ಪ್ರತ್ಯುತ್ತರ ನೀಡಿರುವ ಬಗ್ಗೆ ನನಗೆ ನೆನಪಿರುವುದಿಲ್ಲ.

ನಾನು ದಾವಾ ಆಸ್ತಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡ ಕಾರಣ ಹಾಗೂ ಸದರಿ ಆಸ್ತಿಗೆ ಯಾವುದೇ ದಾಖಲೆಗಳು ಇಲ್ಲದ ಕಾರಣ ನಿಪಿ-32 ನೋಟಿಸ್ ಗೆ ಪ್ರತ್ಯುತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನೋಟಿಸ್ ಗಳಿಗೆ ಪ್ರತ್ಯುತ್ತರ ನೀಡದ ಕಾರಣ 1 ನೇ ಪ್ರತಿವಾದಿಯವರು ಕಾನೂನುಬದ್ಧವಾಗಿ ಒತ್ತುವರಿ ತೆರವುಗೊಳಿಸಿರುತ್ತಾರೆ ಎಂದರೆ ಸಾಕ್ಷಿಯು ನಾವು ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-32 ಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲೆಯ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರನ್ನು ಭೇಟಿ ಮಾಡಿದ್ದು ಅದಕ್ಕೆ ಸಂಬಂಧಿಸಿದಂತೆ ಯಾವುದೇ ಅರ್ಜಿಯನ್ನು ಸದರಿಯವರು ಸ್ವೀಕರಿಸಿರುವುದಿಲ್ಲ. ಸದರಿಯವರು ಅರ್ಜಿಯನ್ನು ಸ್ವೀಕರಿಸಿರುವುದಿಲ್ಲ ಎಂದು ಅವರ ಮೇಲಾಧಿಕಾರಿಗಳಿಗೆ ತಿಳಿಸಿರುವುದಿಲ್ಲ ಮತ್ತು ಕಾನೂನು ಪ್ರಕಾರ ನೋಟಿಸ್ ಜಾರಿ ಮಾಡಿರುವುದಿಲ್ಲ. ಸದರಿಯವರು ಮೇಲಾಧಿಕಾರಿಯವರಿಗೆ ದೂರು ನೀಡಲು ಅಥವಾ ನೋಟಿಸ್ ಜಾರಿ ಮಾಡಲು ನಿಮಗೆ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ಆಡಳಿತ ಮಂಡಳಿ ಸಮಿತಿಯು ಬದಲಾವಣೆ ಆಗುತ್ತಿದ್ದ ಕಾರಣ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ವಾದಿ ಸಂಸ್ಥೆಯಲ್ಲಿ ಸುಮಾರು 2 ವರ್ಷಗಳ ಕಾಲ ಕಾರ್ಯದರ್ಶಿಯಾಗಿದ್ದು, ಕಾರ್ಯದರ್ಶಿಯಾಗಿದ್ದ ವರ್ಷ ನನಗೆ ನೆನಪಿರುವುದಿಲ್ಲ. ನಾನು ಮಾಜಿ ಕಾರ್ಯದರ್ಶಿಯಾಗಿ ಸುಮಾರು 7 ವರ್ಷ ಆಗಿರುತ್ತದೆ. ವಾದಿ ಸಂಸ್ಥೆಗೆ ಪ್ರಸ್ತುತ ಅಧ್ಯಕ್ಷರಾಗಿ ಮಹೇಶ ಎನ್ನುವರು ಇದ್ದು, ಕಾರ್ಯದರ್ಶಿಯಾಗಿ ಲಿಂಗರಾಜುರವರು ಇರುತ್ತಾರೆ. ಸದರಿಯವರು ಯಾವ ದಿನಾಂಕದಿಂದ ಅಧ್ಯಕ್ಷರಾಗಿ ಹಾಗೂ ಕಾರ್ಯದರ್ಶಿಯಾಗಿ ಇರುತ್ತಾರೆ ಎಂಬುದು ನನಗೆ

ಗೊತ್ತಿರುವುದಿಲ್ಲ. ನಾವು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರನ್ನು ಭೇಟಿ ಮಾಡಿರುದಿಲ್ಲ ಎಂದರೆ ಸರಿಯಲ್ಲ.

ನಿಪಿ-33 ರ ವಾದಿ ಮತ್ತು ಪ್ರತಿವಾದಿಯವರ ಬಗ್ಗೆ ನನಗೆ ತಿಳಿದಿದೆ. ಸದರಿ ಪ್ರಕರಣದಲ್ಲಿ ತಿಳಿಸಿರುವ ಮಾಹಿತಿ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ಯಾವ ಪರಿಹಾರವನ್ನು ಕೋರಿ ದಾಖಲಿಸಿರುತ್ತಾರೆ ಎಂಬುದು ನನಗೆ ನೆನಪಿರುವುದಿಲ್ಲ. ಸದರಿ ದಾವೆಯ ವಾದ ಪತ್ರ ಹಾಗೂ ಪ್ರತಿವಾದ ಪತ್ರದ ಸಂಗತಿಗಳು ನನಗೆ ತಿಳಿದಿರುವುದಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದ ಪತ್ರ ಹಾಜರುಪಡಿಸಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ನಾನು ವಾದಪತ್ರದ ಚೆಕ್ಕು ಬಂಧಿಯಲ್ಲಿ ಪೂರ್ವಕ್ಕೆ 2 ನೇ ಪ್ರತಿವಾದಿಯ ಖಾಲಿ ನಿವೇಶನ ಎಂದು ಬರೆಸಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವದಲ್ಲಿ 2 ನೇ ಪ್ರತಿವಾದಿಯ ಆಸ್ತಿ ಮತ್ತು ದಾವಾ ಆಸ್ತಿಯ ನಡುವೆ ಮತ್ತೊಂದು ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯ ಸಂ.682 ಇದ್ದು ಹೊಸ ಸಂ.954 ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ 30 ಅಡಿ, ಉತ್ತರ-ದಕ್ಷಿಣ 75 ಅಡಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಕಾರಣದಿಂದ ನಾನು 2 ನೇ ಪ್ರತಿವಾದಿಯ ವಿರುದ್ಧ ಕೋರಿರುವ ಪರಿಹಾರ ಅಮಾನ್ಯವಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ಆಸ್ತಿಯ ಪಶ್ಚಿಮ ಭಾಗದಲ್ಲಿ ಮತ್ತು ದಾವಾ ಆಸ್ತಿಯ ನಡುವೆ ಆಸ್ತಿ ಸಂ.682 ಇದ್ದರೂ ಸಹ ನಾನು ಸುಳ್ಳು ಚೆಕ್ಕು ಬಂಧಿಯನ್ನು ವಾದ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯವರಿಗೆ ವಯಸ್ಸಾಗಿದ್ದು ಹಾಗೂ ಅನಕ್ಷರಸ್ಥರಾಗಿದ್ದು ಸದರಿಯವರಿಗೆ ಯಾವುದೇ ರಾಜಕೀಯ ಬೆಂಬಲ ಇರುವುದಿಲ್ಲ ಎಂದು ಭಾವಿಸಿ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕು ಬಂಧಿಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ನೀಡಿರುವುದಿಲ್ಲ ಹಾಗೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕಟ್ಟಡ ಕಟ್ಟಲು ಪರವಾನಿಗೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಕಾರಣದಿಂದ ದಾವಾ ಆಸ್ತಿಯಲ್ಲಿ ಕಟ್ಟಿರುವ ಕಟ್ಟಡ ಅನಧಿಕೃತ ಕಟ್ಟಡ

ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ದಾಖಲೆಗಳನ್ನು ನಾನೇ ಸೃಷ್ಟಿ ಮಾಡಿ ಹಾಜರುಪಡಿಸಿದ ದಾಖಲೆಗಳು ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ರಾಜಕೀಯ ಪ್ರಭಾವ ಬೀರಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಾನೂನುಬದ್ಧವಾದ ಹಕ್ಕು ಮಾಲೀಕತ್ವ ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸದ ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

**ಓ ಹೇ ಕೆ ಸರಿ ಇದೆ.**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**